ಅವನನ್ನು ಹಾಸಿಗೆಯ ಮೇಲೆ ಕುಳ್ಳಿರಿಸಿ,

"ಏನಾಯಿತೆಂದು ವಿವರವಾಗಿ ಹೇಳುವಿರಾ?"

"ಸರ್, ನನ್ನ ಹೆಸರು ನಿರ್ಮಲ್, ನನ್ನದೊಂದು ಹಾರ್ಡ್‌ವೇರ್ ಅಂಗಡಿ ಇದೆ. ಬೆಳಗ್ಗೆ ಸುಮಾರು ಐದು ಗಂಟೆ, ನಾನು ಮತ್ತು ನನ್ನ ಹೆಂಡತಿ ಕೆಳಗಿನ ಕೋಣೆಯಲ್ಲಿ ಮಲಗಿದ್ದೆವು. ಯಾರೋ ಬಾಗಿಲು ಬಡಿದ ಹಾಗೆ ಆಯಿತು. ಎದ್ದು ಬರುವಷ್ಟರಲ್ಲಿ, ಯಾರೋ ಇಬ್ಬರು ನಮ್ಮ ಅಡುಗೆಯವನಿಗೆ ಚಾಕು ಹಾಕಿ ಕೆಳಕ್ಕೆ ಬೀಳಿಸಿದ್ದರು. ನಾವು ಭಯದಿಂದ ಕಲ್ಲಾದೆವು. ಹಣ ಇರೋ ಬೀರು ಎಲ್ಲಿ ಅಂತಾ ಕೇಳಿದರು. ಮೇಲೆ ಅಂತಾ ಕೈ ತೋರಿಸಿದೆ. ಅವರಲ್ಲೊಬ್ಬ ನಮಗೆ ಹೆದರಿಸುತ್ತ ಅಲ್ಲಿಯೇ ಇದ್ದ. ಇನ್ನೊಬ್ಬ ಮೇಲೆ ಹೋಗಿ, ಒಂದೆರಡು ಕ್ಷಣದಲ್ಲಿ ಕೆಳಕ್ಕೆ ಬಂದು, ಬೀಗದ ಕೈಕೇಳಿದ. ಭಯದಿಂದ ನನ್ನ ಪತ್ನಿ ತನ್ನ ಇಡೀ ಬೀಗದ ಕೈ ಗೊಂಚಲು ಕೊಟ್ಟಳು. ಮೇಲೆ ಹೋಗಿ ಎಲ್ಲಾ ದೋಚಿಕೊಂಡು, ನಮ್ಮ ಮೊಬೈಲ್‌ಗಳನ್ನೂ ಕಿತ್ತುಕೊಂಡು, ನಮ್ಮನ್ನು ರೂಂ ನೊಳಗೆ ಕೂಡಿ ಹಾಕಿ ಓಡಿ ಹೋದರು."

"ಈ ಕೊಲೆಯಾದ ವ್ಯಕ್ತಿ?"

"ನಮ್ಮಲ್ಲಿ ಅಡುಗೆ ಮಾಡಲು ನೇಮಿಸಿಕೊಂಡಿದ್ದೆವು. ಪಾಪ, ಸೇರಿಕೊಂಡು ಮೂರು ದಿನ ಕೂಡ ಆಗಿರಲಿಲ್ಲ. ನಮ್ಮಿಂದಾಗಿ ಅವನ ಪ್ರಾಣ ಹೋಯಿತು." ಬೇಸರದಿಂದ ನುಡಿದ ನಿರ್ಮಲ್.

ಒಂದು ಕ್ಷಣ ಧನಂಜಯನ ಕಿವಿ ಚುರುಕಾಯಿತು.

"ಮೂರು ದಿನವಾಗಿತ್ತಾ ಸೇರಿಕೊಂಡು?"

"ಅದನ್ನೇ ನೋಡಿ ಸರ್ ವಿಧಿ ಅನ್ನೋದು. ನಾನು ಬೇಡ ಬೇಡ ಅಂತ ಎಷ್ಟೇ ಹೇಳಿದರೂ ಬಿಡಲಿಲ್ಲ. ನಾಲ್ಕು ದಿನ ನನ್ನ ಕೆಲಸ ನೋಡಿ ಆಮೇಲೆ ಬೇಡ ಅಂತ ಅನ್ನಿಸಿದರೆ ಹೇಳಿ ಅಂತಾ ಒತ್ತಾಯ ಮಾಡಿ ಸೇರಿದ್ದ."

ನಿರ್ಮಲ್‌ನ ಮಾತಿನಲ್ಲಿ ಬೇಸರ ಅಡಗಿತ್ತು.

"ಬೀರುವಿನಲ್ಲಿ ಏನೇನಿತ್ತು?"

"ನಿನ್ನೆ ಬ್ಯಾಂಕ್‌ನಿಂದ ತಂದಿದ್ದ ಹದಿನೇಳು ಲಕ್ಷ ರೂಪಾಯಿ, ಸುಮಾರು ಹತ್ತು ಲಕ್ಷದ ಆಭರಣ."

"ಅದೇನು ಹದಿನೇಳು ಲಕ್ಷ... ಅಷ್ಟು ಸ್ಪೆಸಿಫಿಕ್ ಆಗಿ ಹಣ ತಗೊಂಡು ಬಂದಿದ್ದಿರಿ?"

"ನನ್ನ ಅಂಗಡಿ ಪಾರ್ಟನರ್ ಜಯರಾಂ, ತನ್ನ ಶೇರ್ ಬೇಕು ಅಂದಿದ್ದರು. ನನಗೂ ಅವರಿಗೂ ಒಂದು ಎರಡು ಮೂರು ದಿನದಿಂದ ಬಹಳ ಗಲಾಟೆ ಆಗಿತ್ತು. ಪಾರ್ಟನರ್‌ಶಿಪ್ ಬಿಡುತ್ತೇನೆ ಎಂದಿದ್ದರು. ಹಾಗಾಗಿ ಅವರ ಪಾಲಿನ ಹಣ ತಂದು ಇಟ್ಟಿದ್ದೆ."

"ಅದರ ಬಗ್ಗೆ ಗೊತ್ತಿದ್ದ ಯಾರೋ ಬಂದು ಕದ್ದೊಯ್ದಿರಬೇಕು ಅನ್ನುತ್ತಿರಾ?" ಧನಂಜಯ ಪ್ರಶ್ನಿಸಿದ. ಅವನ ಪ್ರಶ್ನೆಯಲ್ಲಿ ಸಣ್ಣದೊಂದು ಅನುಮಾನವಿತ್ತು.

'ವ್ಯಾಪಾರದಲ್ಲಿ ಭಿನ್ನಮತ, ಪಾರ್ಟನರ್‌ಗಳ ಮಧ್ಯೆ ಗಲಾಟೆ, ಅದನ್ನು ಬಿಡುವುದು ಎಲ್ಲಾ ಸಹಜ. ಆದರೆ ಪಾರ್ಟನರ್‌ಶಿಪ್‌ನ ಹಣ ಅದೂ ಹದಿನೇಳು ಲಕ್ಷ ಕ್ಯಾಶ್ ಕೊಡುವುದು, ಅದೂ ತೆರಿಗೆಯವರ ಕಣ್ಣು ತಪ್ಪಿಸಿ? ಏನೋ ಇದೆ ಇಲ್ಲಿ.'

"ಚೆಕ್ ಮುಖಾಂತರ ನೀಡಬಹುದಿತ್ತಲ್ಲವಾ? ಏನು ಬ್ಲಾಕ್ ಮನಿ ವ್ಯವಹಾರನಾ?"

"ಸಾರ್ ಹಾಗೇನೂ ಇಲ್ಲ. ಜಯರಾಂ ಕ್ಯಾಶ್‌ನಲ್ಲಿಯೇ ಬೇಕು ಅಂತ ಹಟ ಹಿಡಿದಿದ್ದ. ಬ್ಲಾಕ್ ಮನಿ ಆಗಿದ್ದರೆ ಹಣ ಮನೆಗೆ ತರುವ ಅವಶ್ಯಕತೆ ಇಲ್ಲ. ನಮ್ಮ ವ್ಯಾಪಾರದಲ್ಲಿ ಆ ಥರ ಹಣ ವರ್ಗಾವಣೆ ಮಾಡೋದು ಸುಲಭ."

ಆ ಕ್ಷಣಕ್ಕೆ ಧನಂಜಯ ನಿರುತ್ತರನಾದ. ಆದರೆ ಒಂದು ಪ್ರಶ್ನೆ ಅವನ ಮನಸ್ಸಿನಲ್ಲಿ ಕೊರೆಯುತ್ತಿತ್ತು.